ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
KARNATAKA STATE FINANCIAL CORPORATION
Established under the State Financial Corporations' Act, 1951

ಸಂಖ್ಯೆ : ಕ.ರಾ.ಹ.ಸಂ./ಪ್ರ.ಕ./ ದಿನಾಂಕ : December 04, 2023
Ref. No. KSFC/H.O./ ಸ/ C-2670 Date :

CIRCULAR NO. 1040

**Sub: Interest Subsidy Scheme for the Entrepreneurs belonging to Minority Communities.**

The Government of Karnataka vide GO No. MWD 49 MDC 2023 Bengaluru dated 11/10/2023 has issued guidelines for implementing an interest subsidy scheme for the entrepreneurs belonging to minority communities for the term loans sanctioned by KSFC. The Board in its meeting held on 08/11/2023 has approved for implementation of the scheme in the Corporation.

The salient features of the scheme are as below:

1. The scheme is applicable to term loans sanctioned by KSFC for establishing new units or existing micro and small enterprises for expansion, diversification, modernization and technological upgradation promoted by entrepreneurs belonging to minority communities.

2. Interpretation of eligible businesses: micro and small enterprises including service sector units as defined under Notification No.1702 (e) dated 01/06/2020 under MSME Development Act, 2006.

3. Investments made for acquisition of land from KIADB/KSSIDC or for acquisition of own land are not eligible for interest subsidy loan.

4. The interest subsidy is eligible for a maximum period of 08 years from the date of disbursement of first installment of loan from KSFC.

5. The small and micro enterprises in the form of sole proprietorship, partnership firms or joint stock companies in which 100% of the capital is held by persons belonging to minority communities only are eligible under the scheme.

6. Such units should not have availed interest subsidy in the past under any other scheme.

7. The activities as interpreted as in Sl.No.2 above which are being financed by KSFC only are eligible to be financed under the scheme.

8. The minimum loan amount under the scheme is Rs.5.00 lakhs and the maximum limit is Rs.10.00 crores.

............... 2

9. A unit can avail loans any number of times but the total maximum limit of loan for a unit is Rs.10.00 crores.

10. KSFC sanctions term loans under the scheme with normal applicable rate of interest (at present 11.50% p.a. net of 0.50% p.a. rebate for prompt repayment). An interest subsidy @ 6% p.a. will be reimbursed by the Government of Karnataka through Minorities Development Corporation to KSFC. The effective rate of interest to the borrowers under the scheme is 5.50% p.a. at present.

11. The units availing loans under this interest subsidy scheme should be regular in repayment to be eligible for interest subsidy in each month.

12. This interest subsidy scheme is applicable only for term loans. It is not applicable to working capital or any other such type of loans.

13. The following units/activities are not eligible under the scheme:

(a) The units which have already availed loans from any NBFC/commercial bank/NSIC/private lender. The loans sanctioned by KSFC earlier cannot be converted under this scheme.
(b) All infrastructure projects, units under CRE sector and educational institutions.
(c) Commercial and trading activities, commercial complexes and malls.
(d) Residential apartments, residential layouts, convention halls, transport vehicles, construction equipments, etc.
(e) Any other activity not eligible to be financed by KSFC and any activity not mentioned in the G.O.

14. The following are the general terms and conditions applicable under the scheme:

(a) The scheme is not applicable to repairs and renovation of existing buildings.
(b) This scheme is only interest subsidy scheme. The overall financial eligibility criteria and other lending parameters are governed by the lending policy of KSFC.
(c) The entrepreneurs belonging to minority communities who want to avail loans under this scheme shall produce the minority community certificate issued by the concerned Tahasildar in the prescribed format.
(d) For selection of entrepreneurs under the scheme, there shall be a committee under the chairmanship of the concerned Branch Manager of KSFC. The Lead Bank Manager, the District Officer of the Minorities Welfare Department and the District Manager of Karnataka Minorities Development Corporation are the members of the committee. The list of selected entrepreneurs shall be submitted to the State Government through Karnataka Minorities Development Corporation and its approval should be obtained before sanction of loan.

.................... 3

15. The interest subsidy amounts will be released to KSFC upfront. KSFC will adjust the eligible interest subsidy to the respective loan account on recovery of installments within the prescribed time limit. If there is any shortfall in the amount released by the government for interest subsidy, the borrowers have to pay full interest and take reimbursement of interest subsidy when released by the government.

The branches shall ensure the clearance from the State Government before placing the eligible proposals before the sanctioning authority.

A copy of the Government Order dated 11/10/2023 is enclosed herewith for ready reference. All the concerned are hereby instructed to go through this G.O. and follow the guidelines given therein strictly while considering the loan proposals under the scheme.

The working guidelines along with details of General Ledger Codes for accounting receipts and utilization of interest subsidy under the scheme will be issued by the Controller Department separately.

The contents of this circular shall be brought to the notice of all the concerned in your office/department.

MANAGING DIRECTOR

To

All AGMs/BMs of Branches
All AGMs/HoDs of IA Cells
All Section Heads in HO
All the General Managers
HoD(IA) & HoD(IT & MIS)
PA to MD, & Notice Board

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2023-24ನೇ ಸಾಲಿನ ಜುಲೈ ಆಯವ್ಯಯ ಭಾಷಣದ ಕಂಡಿಕೆ-163ರಲ್ಲಿ ಘೋಷಿಸಿರುವಂತೆ 10 ಕೋಟಿ ರೂ.ಗಳವರೆಗಿನ ಸಾಲಕ್ಕೆ ಶೇ.6 ರಷ್ಟು ಬಡ್ಡಿ ಸಹಾಯಧನವನ್ನು ನೀಡುವ ಯೋಜನೆಯನ್ನು ಅಲ್ಪಸಂಖ್ಯಾತರ ಸಮುದಾಯದ ಉದ್ಯಮಿಗಳಿಗೂ ವಿಸ್ತರಿಸುವ ಬಗ್ಗೆ.

**ಓದಲಾಗಿದೆ:**
1. ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ: ಆಇ 618 ವೆಚ್ಚ-3/2023, ದಿನಾಂಕ: 08.08.2023.
2. ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ) ಇವರ ಏಕ ಕಡತ ಸಂಖ್ಯೆ: KMDC/DEVP/DOTH/4/2023-dev, ದಿನಾಂಕ:04.09.2023

21.10.2023

ಕ.ರಾ.ಹ.ಸಂ
ವ್ಯ.ನಿ.ರ ಕಛೇರಿ
ಸಂಖ್ಯೆ: 611 ದಿ: 21/10/2023

### ಪ್ರಸ್ತಾವನೆ

2023-24ನೇ ಸಾಲಿನ ಜುಲೈ ಆಯವ್ಯಯ ಭಾಷಣದ ಕಂಡಿಕೆ-163ರಲ್ಲಿ ಈ ಕೆಳಕಂಡಂತೆ ಘೋಷಿಸಲಾಗಿರುತ್ತದೆ.

> "ರಾಜ್ಯದ ಸೇವಾ ವಲಯದಲ್ಲಿ ಇರುವ ವಿಪುಲ ಅವಕಾಶಗಳನ್ನು ಹಿಂದುಳಿದ ವರ್ಗಗಳ ಪ್ರವರ್ಗ-1 ಮತ್ತು ಪ್ರವರ್ಗ-2(ಎ) ಜಾತಿಗಳಿಗೆ ಸೇರಿದ ಉದ್ಯಮಿಗಳು ಸದ್ಬಳಕೆ ಮಾಡಿಕೊಳ್ಳುವ ಉದ್ದೇಶದಿಂದ ಪ್ರಥಮ ಬಾರಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಪಡೆಯುವ 10 ಕೋಟಿ ರೂ. ಗಳವರೆಗಿನ ಸಾಲಕ್ಕೆ ಶೇ.6 ರಷ್ಟು ಬಡ್ಡಿ ಸಹಾಯಧನವನ್ನು ನೀಡಲಾಗುವುದು."

ಮೇಲಿನ ಆಯವ್ಯಯ ಘೋಷಣೆಯಂತೆ ಅಲ್ಪಸಂಖ್ಯಾತರ ಸಮುದಾಯದ ಉದ್ಯಮಿಗಳಿಗೂ ಸಹ ಪ್ರಥಮ ಬಾರಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಪಡೆಯುವ 10 ಕೋಟಿ ರೂ. ಗಳವರೆಗಿನ ಸಾಲಕ್ಕೆ ಶೇ.6 ರಷ್ಟು ಬಡ್ಡಿ ಸಹಾಯಧನವನ್ನು ನೀಡಿ, ಈ ಸೌಲಭ್ಯವನ್ನು ಅಲ್ಪಸಂಖ್ಯಾತ ಸಮುದಾಯದ ಉದ್ಯಮಿಗಳಿಗೆ ವಿಸ್ತರಿಸಲಾಗಿದ್ದು, ಅದರಂತೆ ಈ ಸಂಬಂಧ ಅಗತ್ಯವಿರುವ ರೂಪುರೇಷೆಗಳನ್ನು ಸಿದ್ಧಪಡಿಸಲು ಸೂಕ್ತ ಕ್ರಮವಹಿಸುವಂತೆ ಮೇಲೆ ಓದಲಾದ (1)ರ ಪತ್ರದಲ್ಲಿ ಆರ್ಥಿಕ ಇಲಾಖೆಯು ತಿಳಿಸಿರುತ್ತದೆ.

ಮಾನ್ಯ ಮುಖ್ಯಮಂತ್ರಿಯವರು ಅಲ್ಪಸಂಖ್ಯಾತರ ಸಮುದಾಯದ ಉದ್ಯಮಿಗಳಿಗೆ ಪ್ರಥಮ ಬಾರಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಮೂಲಕ ಪಡೆಯುವ ರೂ.10.00 ಕೋಟಿ ರವರೆಗಿನ ಸಾಲಕ್ಕೆ ಶೇ.6 ರಷ್ಟು ಬಡ್ಡಿ ಸಹಾಯಧನ ನೀಡಲಾಗುವುದು ಎಂದು ಘೋಷಿಸಿರುವಂತೆ, ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಉದ್ಯಮಶೀಲರು ಸ್ಥಾಪಿಸುವ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕಾ ಘಟಕಗಳಿಗೆ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕಾ ಘಟಕಗಳ ವಿಸ್ತರಣೆ/ ಆಧುನೀಕರಣ/ ವೈವಿಧ್ಯೀಕರಣ(Diversification)/ ತಾಂತ್ರಿಕ ಉನ್ನತೀಕರಣ ಚಟುವಟಿಕೆಗಳಲ್ಲಿ ಹೂಡಿಕೆಗಾಗಿ ಸಾಲ ಪಡೆಯುವ ಘಟಕಗಳಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಮೂಲಕ ಶೇ.6 ರಷ್ಟು ಬಡ್ಡಿ ಸಹಾಯಧನವನ್ನು ನೀಡಲು ಸರ್ಕಾರದ ಮಂಜೂರಾತಿ ನೀಡುವಂತೆ ಕೋರಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಇವರು ಮೇಲೆ ಓದಲಾದ (2) ರಲ್ಲಿನ ಏಕಕಡತದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: MWD 49 MDC 2023, ಬೆಂಗಳೂರು, ದಿನಾಂಕ:11.10.2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಉದ್ಯಮಶೀಲರು ಸ್ಥಾಪಿಸುವ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕಾ ಘಟಕಗಳಿಗೆ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕಾ ಘಟಕಗಳ ವಿಸ್ತರಣೆ/ ಆಧುನೀಕರಣ/ ವೈವಿಧ್ಯೀಕರಣ (Diversification)/ತಾಂತ್ರಿಕ ಉನ್ನತೀಕರಣ ಚಟುವಟಿಕೆಗಳಲ್ಲಿ ಹೂಡಿಕೆಗಾಗಿ ಸಾಲ ಪಡೆಯುವ ಘಟಕಗಳಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಮೂಲಕ ಪಡೆಯುವ 10.00 ಕೋಟಿ ರೂ. ಗಳವರೆಗಿನ (ರೂಪಾಯಿ ಹತ್ತು ಕೋಟಿಗಳು ಮಾತ್ರ) ಸಾಲಕ್ಕೆ ಶೇ.6ರಷ್ಟು ಬಡ್ಡಿ ಸಹಾಯಧನವನ್ನು ನೀಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಯೋಜನೆಗೆ ತಗಲುವ ವೆಚ್ಚವನ್ನು 2023-24ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ: 2225-04-102-0-1(059)ರಡಿ ಒದಗಿಸಿರುವ ಅನುದಾನದ ಮಿತಿಯಲ್ಲಿಯೇ ಭರಿಸತಕ್ಕದ್ದು. ಸದರಿ ಯೋಜನೆಯನ್ನು ಅನುಬಂಧದಲ್ಲಿರುವ ಮಾರ್ಗಸೂಚಿಗಳನುಸಾರ ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಆಇ 752 ವೆಚ್ಚ-3/2023, ದಿನಾಂಕ: 07.10.2023ರಲ್ಲಿ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಪಿಡಿಎಸ್ 78 ಐಎಂಎಂ 2023, ದಿನಾಂಕ: 20.09.2023ರಲ್ಲಿ ನೀಡಿರುವ ಸಹಮತಿಯನುಸಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

11/10/2023

( ನಾಗರಾಜ )
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆ

ಇವರಿಗೆ:

1. ಮಹಾಲೇಖಪಾಲರು (ಅ ಮತ್ತು ಇ), ಕರ್ನಾಟಕ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ, ಕೆ.ಎಂ.ಡಿ.ಸಿ. ಭವನ, ಶೇಷಾದ್ರಿ ರಸ್ತೆ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, KSFC ಭವನ, ಬೆಂಗಳೂರು.
4. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-3&9).
5. ಸರ್ಕಾರದ ಅಧೀನ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
6. ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

# ಅನುಬಂಧ

## ಸರ್ಕಾರದ ಆದೇಶ ಸಂಖ್ಯೆ:MWD 49 MDC 2023, ದಿನಾಂಕ 11.10.2023 ಕ್ಕೆ ಮಾರ್ಗಸೂಚಿ

ರಾಜ್ಯದ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಉದ್ದಿಮೆದಾರರಿಂದ ಹೊಸದಾಗಿ ಸ್ಥಾಪಿಸಲ್ಪಡುವ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಉದ್ಯಮಗಳಿಗೆ ಬಡ್ಡಿ ಸಹಾಯಧನ ಯೋಜನೆ (2023).

****

ರಾಜ್ಯದ ಅಲ್ಪಸಂಖ್ಯಾತರ ವರ್ಗಗಳ ಉದ್ದಿಮೆದಾರರಿಂದ ಸ್ಥಾಪಿಸಲ್ಪಡುವ ಹೊಸ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸೂಕ್ಷ್ಮ ಹಾಗೂ ಸಣ್ಣ ಉದ್ಯಮಗಳಿಗೆ ಸಮಂಜಸವಾದ ಬಡ್ಡಿ ದರದಲ್ಲಿ ಬಂಡವಾಳ ಹೂಡಿಕೆಗಳಿಗೆ ಸಾಂಸ್ಥಿಕ ಸಾಲವನ್ನು ಪಡೆಯುವಲ್ಲಿ ಎದುರಿಸುತ್ತಿರುವ ತೊಂದರೆಗಳನ್ನು ಪರಿಗಣಿಸಿ, ಕರ್ನಾಟಕ ಸರ್ಕಾರವು ಅಲ್ಪಸಂಖ್ಯಾತರ ವರ್ಗಗಳ ಉದ್ದಿಮೆದಾರರಿಗೆ ಪ್ರತ್ಯೇಕ ವಾರ್ಷಿಕ ಶೇ.6.00 ರಷ್ಟು ಬಡ್ಡಿ ಸಹಾಯಧನ (Interest Subvention / Subsidy) ಯೋಜನೆಯನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (KSFC) ಮೂಲಕ ಜಾರಿಗೊಳಿಸಿದೆ.

### 01. ಅಲ್ಪಸಂಖ್ಯಾತರ ವರ್ಗಗಳ ಉದ್ದಿಮೆದಾರರಿಂದ ಸ್ಥಾಪಿಸಲ್ಪಡುವ ಹೊಸ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸೂಕ್ಷ್ಮ ಹಾಗೂ ಸಣ್ಣ ಉದ್ಯಮಗಳಿಗೆ ಬಡ್ಡಿ ಸಹಾಯಧನ (Interest Subvention / Subsidy) ಯೋಜನೆ (2023) ರ ಪ್ರಮುಖ ಅಂಶಗಳು.

ಎ) ಈ ಯೋಜನೆಯನ್ನು ಹೊಸ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸೂಕ್ಷ್ಮ ಹಾಗೂ ಸಣ್ಣ ಉದ್ಯಮಗಳಿಗೆ ವಿಸ್ತರಿಸುವುದು.

ಬಿ) ಉದ್ಯಮಗಳ ವ್ಯಾಖ್ಯಾನ – ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ ಕಾಯ್ದೆ .2006ರ ನಿಬಂಧನೆಯಲ್ಲಿ ದಿನಾಂಕ: 1ನೇ ಜೂನ್ 2020ರ ಎಸ್ ಓ. 1702(ಇ) ಅಧಿಸೂಚನೆ ಪ್ರಕಾರ ಚಾಲ್ತಿಯಲ್ಲಿರುವ ಹಾಗೂ ಕಾಲಕಾಲಕ್ಕೆ ಮಾಡಲಾದ ಮಾರ್ಪಾಡುಗಳ ಸೇವಾ ವಲಯದ ವ್ಯಾಖ್ಯಾನ.

ಸಿ) ಹೊಸ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಉದ್ಯಮಗಳ ವಿಸ್ತರಣೆ ವೈವಿಧ್ಯೀಕರಣ, ಆಧುನೀಕರಣ, ತಂತ್ರಜ್ಞಾನದ ಉನ್ನತೀಕರಣ ಇತ್ಯಾದಿಗಳಿಗೆ ಕಟ್ಟಡ, ಸ್ಥಾವರ ಮತ್ತು ಯಂತ್ರೋಪಕರಣಗಳ ಒಟ್ಟು ಬ್ಲಾಕ್ನ ಎಲ್ಲಾ ಹೊಸ ಹೂಡಿಕೆಗಳಿಗೆ ಈ ಯೋಜನೆಯನ್ನು ವಿಸ್ತರಿಸುವುದು.

ಡಿ) ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಾದ ಕೆ.ಐ.ಎ.ಡಿ.ಬಿ/ ಕೆ.ಎಸ್.ಎಸ್.ಐ.ಡಿ.ಸಿ. ಯಿಂದ ಮಂಜೂರಾದ ಭೂಮಿಯಲ್ಲಿ ಮಾಡಿದ ಹೂಡಿಕೆ, ಸ್ವಂತ/ ಗುತ್ತಿಗೆ ಪಡೆದ ಭೂಮಿಯನ್ನು ಖರೀದಿಸಲು ಮಾಡಿದ ಹೂಡಿಕೆಗಳು ಬಡ್ಡಿ ಸಹಾಯಧನ ಯೋಜನೆಯಡಿಯಲ್ಲಿ ಹಣಕಾಸು ಪಡೆಯಲು ಅರ್ಹವಿರುವುದಿಲ್ಲ. ಆದಾಗ್ಯೂ ಭೂಮಿಯ ಮೇಲಿನ ಹೂಡಿಕೆಗೆ ಸಾಲಪಡೆಯಲು ಇಚ್ಛಿಸಿದಲ್ಲಿ ಕೆ.ಎಸ್.ಎಫ್.ಸಿ.ಯಲ್ಲಿ ಚಾಲ್ತಿಯಲ್ಲಿರುವ ಸಾಮಾನ್ಯ ಸಾಲ ಯೋಜನೆಯಡಿಯಲ್ಲಿ ಚಾಲ್ತಿಯಲ್ಲಿರುವ ಬಡ್ಡಿದರದಲ್ಲಿ ಸಾಲ ಪಡೆಯಲು ಅರ್ಹರಿರುತ್ತಾರೆ.

ಇ) ಕೆ.ಎಸ್ಎಫ್.ಸಿ. ಸಾಲದ ಮೊದಲ ಕಂತಿನ ವಿತರಣೆಯ ದಿನಾಂಕದಿಂದ ಗರಿಷ್ಠ 8 [illegible]

**02. ಅಲ್ಪಸಂಖ್ಯಾತರ ವರ್ಗಗಳ ಉದ್ದಿಮೆದಾರರಿಂದ ಸ್ಥಾಪಿಸಲ್ಪಡುವ ಹೊಸ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸೂಕ್ಷ್ಮ ಹಾಗೂ ಸಣ್ಣ ಉದ್ಯಮಗಳಿಗೆ ಬಡ್ಡಿ ಸಹಾಯಧನ (Interest Subvention / Subsidy) ಯೋಜನೆ (2023) ರಡಿಯಲ್ಲಿ ಸಾಲ ಪಡೆಯಲು ಅರ್ಹತೆ ಹಾಗೂ ಮಾರ್ಗಸೂಚಿಗಳು.**

ಎ) ಅಲ್ಪಸಂಖ್ಯಾತರ ವರ್ಗಗಳ ಉದ್ಯಮಿಗಳಿಂದ 'ಸ್ಥಾಪಿಸಲ್ಪಟ್ಟ ಉದ್ಯಮಗಳು' ಅಂದರೆ, ಸ್ವಂತ ಮಾಲೀಕತ್ವ, ಪಾಲುದಾರಿಕೆ ಸಂಸ್ಥೆಗಳು, ಕಂಪನಿಗಳು ಹಾಗೂ ಇತರ ಕಾನೂನು ಅಸ್ತಿತ್ವದ ಉದ್ಯಮಿಗಳು. ಪ್ರವರ್ತಕರ ಬಂಡವಾಳ ಹೂಡಿಕೆಯು ಶೇ.100 ರಷ್ಟು ಅಲ್ಪಸಂಖ್ಯಾತರ ವರ್ಗಗಳಲ್ಲಿ ಇರಬೇಕು.

ಬಿ) ಈ ಉದ್ಯಮಿಗಳು ಈಗಾಗಲೇ ಲಭ್ಯವಿರುವ ಬೇರೆ ಯೋಜನೆಯಡಿ ಬಡ್ಡಿ ಸಹಾಯಧನ ಸಾಲದ ನೆರವು ಪಡೆದಿದ್ದರೆ ಈ ಯೋಜನೆಯಡಿ ಸಾಲದ ನೆರವು ಲಭ್ಯವಿರುವುದಿಲ್ಲ.

ಸಿ) ಕೆ.ಎಸ್.ಎಫ್.ಸಿ. ಕಾಲಕಾಲಕ್ಕೆ ಗುರುತಿಸಿದ / ನವೀಕರಿಸಿದ ಕೈಗಾರಿಕಾ ಚಟುವಟಿಕೆಗಳಿಗೆ ಮಾತ್ರ ಈ ಯೋಜನೆಯಡಿಯಲ್ಲಿ ಸಾಲದ ನೆರವು ಪಡೆಯಲು ಅರ್ಹವಿರುತ್ತದೆ.

<u>ಸಾಲದ ಪ್ರಮಾಣ</u> :

ಎ) ಸೂಕ್ಷ್ಮ ಮತ್ತು ಸಣ್ಣ ಪ್ರಮಾಣದ ಘಟಕಗಳು: ಕೈಗಾರಿಕಾ ಕ್ಷೇತ್ರದಲ್ಲಿ ನೇರವಾಗಿ ತೊಡಗಿಸಿಕೊಂಡಿರುವ ಕಾನೂನು ಅಸ್ತಿತ್ವದ ಪ್ರತ್ಯೇಕ ಉದ್ಯಮಗಳಿಗೆ ಕಟ್ಟಡ, ಸ್ಥಾವರ ಮತ್ತು ಯಂತ್ರೋಪಕರಣಕ್ಕೆ ಗರಿಷ್ಟ ಸಾಲದ ಗರಿಷ್ಟ ಮಿತಿ 10.00 ಕೋಟಿ ರೂ.ಗಳು.

ಬಿ) ಉದ್ಯಮಿಗಳು ಈ ಯೋಜನೆಯಡಿಯಲ್ಲಿ ಅನೇಕ ಬಾರಿ ಸಾಲಗಳನ್ನು ಪಡೆಯಬಹುದು. ಆದರೆ, ಪ್ರತಿ ಘಟಕಕ್ಕೆ ಒಟ್ಟಾರೆ ಸಾಲದ ಗರಿಷ್ಟ ಮಿತಿ ರೂ.10.00 ಕೋಟಿ ಮಾತ್ರ ಲಭ್ಯವಿರುತ್ತದೆ.

ಸಿ) ಸಾಲದ ಮಿತಿ 10.00 ಕೋಟಿ ರೂ.ಗಳು ಮೀರಿದರೆ, ಹೆಚ್ಚುವರಿ ಭಾಗದ ಸಾಲಕ್ಕೆ ಕೆ.ಎಸ್.ಎಫ್.ಸಿ.ಯಲ್ಲಿ ಚಾಲ್ತಿಯಲ್ಲಿರುವ ಬಡ್ಡಿ ದರವು ಅನ್ವಯಿಸುತ್ತದೆ.

ಡಿ) ಸಾಲದ ಕನಿಷ್ಟ ಮಿತಿ 5.00 ಲಕ್ಷ ರೂ.ಗಳಾಗಿರುತ್ತದೆ.

**03. ಅನ್ವಯವಾಗುವ ಬಡ್ಡಿ ದರ:**

ಎ) ಕೆ.ಎಸ್.ಎಫ್.ಸಿ.ಯು ಚಾಲ್ತಿಯಲ್ಲಿರುವ ಬಡ್ಡಿ ದರದಲ್ಲಿ ಸಾಲವನ್ನು ಮೌಲ್ಯಮಾಪನ ಮಾಡಿ ಸಾಲ ಮಂಜೂರು ಮಾಡುತ್ತದೆ. ಉದ್ದಿಮೆದಾರರು ಅದಕ್ಕೆ ಅನುಗುಣವಾಗಿ ಬಡ್ಡಿಯನ್ನು ಪಾವತಿಸಬೇಕು.

ಬಿ) ಈ ಯೋಜನೆಯಡಿ ಸ್ಥಾಪಿಸಲ್ಪಡುವ ಸೂಕ್ಷ್ಮ ಹಾಗೂ ಸಣ್ಣ ಘಟಕಗಳಿಗೆ ಬಡ್ಡಿ ಸಹಾಯಧನ ಯೋಜನೆ (2023) ಯಡಿಯಲ್ಲಿ ಮಂಜೂರಾದ ಸಾಲಗಳಿಗೆ ನಿಗಧಿತ ಸಮಯದಲ್ಲಿ ಮರುಪಾವತಿಗೆ ವಾರ್ಷಿಕ ಶೇ.0.50 ರಿಯಾಯಿತಿಯನ್ನು ವಿಸ್ತರಿಸಲಾಗುವುದು.

ಸಿ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಲ್ಲಿ ಪ್ರಸ್ತುತ ಬಡ್ಡಿ ದರವು ವಾರ್ಷಿಕ ಶೇ.12.00 ನಿಗಧಿತ ಸಮಯದಲ್ಲಿ ಮರುಪಾವತಿಗೆ ಶೇ.0.50 ರಿಯಾಯಿತಿಗಳನ್ನು ವಿಸ್ತರಿಸಿದಲ್ಲಿ ಪ್ರಸ್ತುತ ಬಡ್ಡಿ ದರದಲ್ಲಿ ವಾರ್ಷಿಕ ಶೇ.6.00 ರಷ್ಟು ಬಡ್ಡಿ ಸಹಾಯಧನವು (Interest Subvention / Subsidy) (Upfront) ಭಾಗವಾಗಿದ್ದು, ಅಲ್ಪಸಂಖ್ಯಾತರ ವರ್ಗಗಳ ಉದ್ದಿಮೆದಾರರಿಗೆ ವಾರ್ಷಿಕ ನಿವ್ವಳ ಶೇ.5.50 ರಷ್ಟು ಬಡ್ಡಿದರ ಅನ್ವಯವಾಗುತ್ತದೆ.

ಡಿ) ಕೆ.ಎಸ್.ಎಫ್.ಸಿ.ಯು ಚಾಲ್ತಿ ಬಡ್ಡಿ ದರವನ್ನು ಹೆಚ್ಚಿಸಿದಾಗ ಈ ಯೋಜನೆಯಡಿ ಬಡ್ಡಿ ಸಹಾಯಧನವು ಶೇ.6.00 ರಷ್ಟು ಸ್ಥಿರವಾಗಿದ್ದು, ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಉದ್ದಿಮೆದಾರರು ಹೆಚ್ಚಾದ ಬಡ್ಡಿ ದರವನ್ನು ಭರಿಸಬೇಕಾಗುತ್ತದೆ.

ಇ) ಬಡ್ಡಿ ಸಹಾಯಧನವನ್ನು ಪಡೆಯಲು ಉದ್ದಿಮೆದಾರರು ಕೆ.ಎಸ್.ಎಫ್.ಸಿ. ಸಂಸ್ಥೆಯಿಂದ ಪಡೆದ ಸಾಲಗಳನ್ನು ಚಾಚೂ ತಪ್ಪದೆ ಪ್ರತಿ ತಿಂಗಳು ನಿಗಧಿತ ಸಮಯಕ್ಕೆ ಮರುಪಾವತಿ ಮಾಡಬೇಕಾಗಿರುತ್ತದೆ. ಒಂದು ವೇಳೆ ನಿಗಧಿತ ಸಮಯದಲ್ಲಿ ಮರುಪಾವತಿ ಮಾಡದ ಕಂತುಗಳಿಗೆ ಸಹಾಯಧನ ಪಡೆಯಲು ಅರ್ಹರಿರುವುದಿಲ್ಲ.

ಎಫ್) ಉದ್ದಿಮೆದಾರರು ಸಾಲಗಳ ಮೊದಲ ಕಂತು ವಿತರಣೆಯ ದಿನಾಂಕದಿಂದ ಗರಿಷ್ಠ 8 ವರ್ಷಗಳವರೆಗೆ ಬಡ್ಡಿ ಸಹಾಯಧನಕ್ಕೆ ಅರ್ಹರಾಗಿರುತ್ತಾರೆ. ಯೋಜನೆಯ ಕಾರ್ಯಸಾಧ್ಯತೆಯನ್ನು ಪರಿಗಣಿಸಿ ಮರುಪಾವತಿ ಅವಧಿಯು 8 ವರ್ಷಗಳನ್ನು ಮೀರಿದರೂ ಆಯಾ ಸಾಲ / ಸಾಲಗಳ ಮೊದಲ ವಿತರಣೆಯ ದಿನಾಂಕದಿಂದ ಗರಿಷ್ಠ 8 ವರ್ಷಗಳವರೆಗೆ ಬಡ್ಡಿ ಸಹಾಯಧನ ಲಭ್ಯವಿದ್ದು, ಗರಿಷ್ಠ ಅವಧಿ ಅಂದರೆ 8 ವರ್ಷಗಳ ನಂತರ ಮರುಪಾವತಿಸಿದ ಸಾಲ / ಸಾಲಗಳ ಬಾಕಿಗೆ ಕೆ.ಎಸ್.ಎಫ್.ಸಿ.ಯಲ್ಲಿ ಚಾಲ್ತಿಯಲ್ಲಿರುವ ಬಡ್ಡಿ ದರವು ಅನ್ವಯವಾಗುತ್ತದೆ.

ಜಿ) ಯೋಜನೆಯಡಿ ಮೇಲೆ ತಿಳಿಸಲಾದ ಉದ್ಯಮಗಳಿಗೆ ಮಂಜೂರಾದ ಅವಧಿ ಸಾಲಗಳಿಗೆ ಮಾತ್ರ ಬಡ್ಡಿ ಸಹಾಯಧನ (Interest Subvention / Subsidy) (Upfront) ಲಭ್ಯವಿರುತ್ತದೆ. ದುಡಿಮೆ ಬಂಡವಾಳಕ್ಕೆ ನೀಡಿದ ಅವಧಿ ಸಾಲ, ಪ್ರತಿಷ್ಠಿತ ಉದ್ದಿಮೆದಾರರ ಸಾಲ, ಸಾಂಸ್ಥಿಕ ಸಾಲ ಇತ್ಯಾದಿಗಳಿಗೆ ಈ ಯೋಜನೆ ಅನ್ವಯವಾಗುವುದಿಲ್ಲ.

## <u>04. ಬಡ್ಡಿ ಸಹಾಯಧನ (Interest Subvention / Subsidy) ಯೋಜನೆ (2023) ಯಡಿಯಲ್ಲಿ ಸಾಲ ಪಡೆಯಲು ಅನರ್ಹವಾದ ಉದ್ಯಮಗಳು/ ಚಟುವಟಿಕೆಗಳು.</u>

ಎ) ಎನ್.ಬಿ.ಎಫ್.ಸಿ/ ಎನ್.ಎಸ್.ಐ.ಸಿ/ ಇತರೆ ಬ್ಯಾಂಕ್‌ಗಳು/ ಖಾಸಗಿ ಹಣಕಾಸುದಾರರು, ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಗಳು / ಮರು ಹಣಕಾಸುಗಳು (Re Finance) ಅಥವಾ ಕೆ.ಎಸ್.ಎಫ್.ಸಿ.ಯಿಂದ ಪಡೆದ ಹಿಂದಿನ ಸಾಲ/ಸಾಲಗಳ ಪರಿವರ್ತನೆಗಾಗಿ ಪಡೆದ ಸಾಲಗಳು.

ಬಿ) ಈ ಕೆಳಗಿನ ಚಟುವಟಿಕೆಗಳಲ್ಲಿ ತೊಡಗಿರುವ ಉದ್ಯಮಗಳು :

ಅ) ಎಲ್ಲಾ ಮೂಲ ಸೌಕರ್ಯ ಯೋಜನೆಗಳು, ವಾಣಿಜ್ಯ ರಿಯಲ್ ಎಸ್ಟೇಟ್(CRE) ಶಿಕ್ಷಣ ಸಂಸ್ಥೆಗಳು ಇತ್ಯಾದಿ.

ಆ) ವಾಣಿಜ್ಯ / ವ್ಯಾಪಾರ ಚಟುವಟಿಕೆಗಳು, ವ್ಯಾಪರ ಮಳಿಗೆಗಳು ಮತ್ತು ಮಾಲ್.

ಇ) ವಾಸಕ್ಕೆ ನಿರ್ಮಿಸುವ ವಸತಿ ಬಡಾವಣೆಗಳು ಹಾಗೂ ಬಹುಮಹಡಿ ವಸತಿ ಕಟ್ಟಡಗಳು, ಸಿನಿಮಾ ಮಂದಿರಗಳು, ಕಲ್ಯಾಣ ಮಂಟಪಗಳು, ಸಾರಿಗೆ ವಾಹನಗಳ ನಿರ್ಮಾಣ ಉಪಕರಣಗಳು ಇತ್ಯಾದಿ.

ಈ) ಕೆ.ಎಸ್.ಎಫ್.ಸಿ.ಯ ಪ್ರಕಾರ ಅರ್ಹ ವಲಯದ ಚಟುವಟಿಕೆಗಳನ್ನು ಹೊರತುಪಡಿಸಿ ಅಥವಾ ಇಲ್ಲಿ ನಿರ್ಧಿಷ್ಟವಾಗಿ ಉಲ್ಲೇಖಿಸದ ಬೇರೆ ಯಾವುದೇ ಚಟುವಟಿಕೆಗಳು.

## 05. ಇತರೆ ಸಾಮಾನ್ಯ ನಿಯಮಗಳು ಮತ್ತು ಷರತ್ತುಗಳು :

ಎ) ಈ ಯೋಜನೆಯಡಿ ಈಗಾಗಲೇ ಇರುವ ಕಟ್ಟಡಗಳ ನವೀಕರಣ / ರಿಪೇರಿ ಕೆಲಸಗಳಿಗೆ ತಗಲುವ ಬಂಡವಾಳ ಹೂಡಿಕೆಯ ಸಾಲಗಳಿಗೆ ಈ ಬಡ್ಡಿ ಸಹಾಯಧನವು ಲಭ್ಯವಿರುವುದಿಲ್ಲ.

ಬಿ) ಕೆ.ಎಸ್.ಎಫ್.ಸಿ.ಯಲ್ಲಿ ಸಾಲದ ಅನುಮೋದನೆಯ ನಿಯಮಗಳು ಮತ್ತು ಷರತ್ತುಗಳಾದ ಪ್ರವರ್ತಕರ ಪಾಲಿನ ಬಂಡವಾಳ, ಸಾಲ ಈಕ್ವಿಟಿ ಅನುಪಾತ, ಪೂರಕ ಭದ್ರತಾ ಅವಶ್ಯಕತೆ, ಯೋಜನೆಯ ಕಾರ್ಯಸಾಧ್ಯತೆ, ಗರಿಷ್ಠ ಸಾಲದ ಮಿತಿ, ಇತ್ಯಾದಿಗಳು ಚಾಲ್ತಿಯಲ್ಲಿರುವ ಸಂಸ್ಥೆಯ ಸಾಲದ ನೀತಿಯ ಪ್ರಕಾರ ಅನ್ವಯವಾಗುತ್ತವೆ ಹಾಗೂ ಈ ಮಾರ್ಗಸೂಚಿಗಳಿಗೆ ಯಾವುದೇ ರೀತಿಯ ರಿಯಾಯಿತಿಯನ್ನು ನೀಡಲಾಗುವುದಿಲ್ಲ.

ಸಿ) ಈ ಯೋಜನೆಯಡಿ ಸಾಲ ಪಡೆಯುವ ಉದ್ಯಮಿಗಳು ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ತಹಸೀಲ್ದಾರ್ ರಿಂದ ನಿಗಧಿತ ನಮೂನೆಯಲ್ಲಿ ಪಡೆದು ಸಾಲದ ಅರ್ಜಿಯನ್ನು ಸಲ್ಲಿಸತಕ್ಕದ್ದು.

ಡಿ) ಸಾಲವನ್ನು ನಿಗದಿತ ಅವಧಿಯೊಳಗೆ ವಸೂಲಿ ಮಾಡಿಕೊಳ್ಳುವ ಸಂಪೂರ್ಣ ಜವಾಬ್ದಾರಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯದಾಗಿರುತ್ತದೆ. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯೇ ನಿಯಮಾನುಸಾರ Security/Guarantee ಪಡೆದು ಸಾಲ ಮಂಜೂರು ಮಾಡಲು ಕ್ರಮ ವಹಿಸತಕ್ಕದ್ದು. ಫಲಾನುಭವಿಯು ಯಾವುದೇ ರೀತಿಯಲ್ಲಿ ನಷ್ಟ ಹೊಂದಿದ್ದಲ್ಲಿ ಅಥವಾ ಸಾಲ ಮರುಪಾವತಿಸದಿದ್ದಲ್ಲಿ ಸರ್ಕಾರ ಅಥವಾ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಹೊಣೆಯಾಗುವುದಿಲ್ಲ/ಜವಾಬ್ದಾರರಲ್ಲ.

ಇ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ನೀಡುವ ಬಡ್ಡಿ ಸಹಾಯಧನ ಯೋಜನೆ ಅಡಿಯಲ್ಲಿ ಕರ್ನಾಟಕ ರಾಜ್ಯ ಹಣಕಾಸು ನಿಗಮವು ಜಿಲ್ಲಾ ಮಟ್ಟದಲ್ಲಿ ಅಲ್ಪಸಂಖ್ಯಾತ ಉದ್ದಿಮೆದಾರರನ್ನು ಆಯ್ಕೆ ಮಾಡುವಾಗ ಕರ್ನಾಟಕ ರಾಜ್ಯ ಹಣಕಾಸು ನಿಗಮದ ಶಾಖಾ ವ್ಯವಸ್ಥಾಪಕರ ಅಧ್ಯಕ್ಷತೆಯ ಸಮಿತಿಯಲ್ಲಿ ಆಯಾ ಜಿಲ್ಲೆಯ ಲೀಡ್ ಬ್ಯಾಂಕಿನ ವ್ಯವಸ್ಥಾಪಕರು, ಜಿಲ್ಲಾ ಅಧಿಕಾರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಇವರು ಆಯ್ಕೆ ಸಮಿತಿಯ ಸದಸ್ಯರಾಗಿರತಕ್ಕದ್ದು, ಸಮಿತಿ ನಿಯಮಾನುಸಾರ ನಿಗದಿತ ಮಾನದಂಡಗಳನ್ನು ಪೂರೈಸಿದ ಹಾಗೂ Security/Guarantee ಯನ್ನು ಖಾತರಿ ಪಡಿಸಿಕೊಂಡು ಆಯ್ಕೆ ಮಾಡಿದ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಮೂಲಕ ಸರ್ಕಾರಕ್ಕೆ ಸಲ್ಲಿಸಿ ಸರ್ಕಾರದಿಂದ ಮಂಜೂರಾತಿ ಪಡೆಯತಕ್ಕದ್ದು.

## 06. ಬಡ್ಡಿ ಸಹಾಯಧನ ಬಿಡುಗಡೆ :

ಬಡ್ಡಿ ಸಹಾಯಧನ (Interest Subvention / Subsidy) ವನ್ನು ಕೆ.ಎಸ್.ಎಫ್.ಸಿ. ಗೆ ಮುಂಚಿತವಾಗಿ ಬಿಡುಗಡೆ ಮಾಡಲಾಗುತ್ತದೆ.

ಎ) ಅಲ್ಪಸಂಖ್ಯಾತರ ವರ್ಗಗಳ ಇಲಾಖೆಯ ಹೆಡ್‌ನಡಿಯಲ್ಲಿ ಬಡ್ಡಿ ಸಹಾಯಧನವು ಪ್ರತ್ಯೇಕ (Head of account) ಹೊಂದಿರುತ್ತದೆ.

ಬಿ) ಕೆ.ಎಸ್.ಎಫ್.ಸಿ. ಚಾಲ್ತಿ ದರದ ಬಡ್ಡಿಯನ್ನು ಲೆಕ್ಕಾಚಾರ ಮಾಡಿ ಬಡ್ಡಿ ಸಹಾಯಧನ (Interest Subvention/ Subsidy) ಭಾಗವನ್ನು Demand Notice ನಲ್ಲಿ ಸೂಚಿಸತಕ್ಕದ್ದು. ನಿಗಧಿತ ದಿನಾಂಕದಂದು ಉದ್ದಿಮೆದಾರರು ನಿವ್ವಳ ಬಡ್ಡಿ (ಸಹಾಯಧನ ಬಿಟ್ಟು) ಮೊತ್ತವನ್ನು ಪಾವತಿಸಬೇಕು.

ಸಿ) ನಿಗಧಿತ ಅವಧಿಯೊಳಗೆ ಮರುಪಾವತಿ ಮಾಡಿದ ಘಟಕಗಳಿಗೆ ಕೆ.ಎಸ್.ಎಫ್.ಸಿ. ಪ್ರತಿ ತಿಂಗಳು ಬಡ್ಡಿ ಸಹಾಯಧನದ ಅಂಶವನ್ನು ಅಲ್ಪಸಂಖ್ಯಾತ ವರ್ಗದ ಉದ್ಯಮಗಳ ಖಾತೆಗೆ ಜಮಾ ಮಾಡುವುದು.

ಡಿ) ಕೆ.ಎಸ್.ಎಫ್.ಸಿ. ಇವರು ಅಲ್ಪಸಂಖ್ಯಾತರ ವರ್ಗಗಳ ಫಲಾನುಭವಿಗಳಿಗೆ ಬಡ್ಡಿ ಸಹಾಯಧನ ಬಿಡುಗಡೆಯ ತ್ರೈಮಾಸಿಕ ಪಟ್ಟಿಯನ್ನು ವ್ಯವಸಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಇವರಿಗೆ ಸಲ್ಲಿಸತಕ್ಕದ್ದು.

**07. ಸ್ಪಷ್ಟೀಕರಣಗಳು :**

ಯೋಜನೆಯ ಬಗ್ಗೆ ಯಾವುದೇ ಸ್ಪಷ್ಟೀಕರಣವನ್ನು ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ ಅಲ್ಪಸಂಖ್ಯಾತರ ವರ್ಗಗಳ ಇಲಾಖೆಯಿಂದ ಪಡೆಯಬಹುದು.

11/10/2023

(ನಾಗರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್
ಇಲಾಖೆ.